

150 ವರ್ಷಕ್ಕೂ ಹಳೆಯ ಆಗಾಖಾನ್ ಪ್ಯಾಲೇಸ್‌ಗೆ ಭಾರತ ಸ್ವಾತಂತ್ರ್ಯ ಹೋರಾಟದ ಜೊತೆಗೆ ನಿಕಟ ನಂಟಿದೆ. ಇಂದಿಗೂ ಆ ಜಾಗದಲ್ಲಿ ಅಡ್ಡಾಡಿದರೆ ಸ್ವಾತಂತ್ರ್ಯ ಹೋರಾಟದ ದೇಶಭಕ್ತಿಯ ಗಾಳಿ ಎದೆಯಲ್ಲಿ ತುಂಬಿಕೊಳ್ಳುತ್ತದೆ.



ಗಾಂಧಿ ಸ್ಮೃತಿಗಳ ನೆಲೆ ಆಗಾಖಾನ್ ಪ್ಯಾಲೇಸ್

ಶುರುವಾದ ಎರಡೇ ದಿನಕ್ಕೆ ಅವರನ್ನು ಬಂಧಿಸಿ ಇಲ್ಲಿಗೆ ತಂದು ಇಡಲಾಯಿತು. ಅವರ ಜೊತೆಯಲ್ಲಿ ಕಸ್ತೂರಬಾ, ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವಭಾಯ್ ದೇಸಾಯಿ ಹಾಗೂ ಸರೋಜಿನಿ ನಾಯ್ಡು ಅವರನ್ನೂ ಕರೆತರಲಾಗಿತ್ತು. ಸುಮಾರು ಎರಡು ವರ್ಷಗಳ ಕಾಲ, ಅಂದರೆ 1944ರ ಮೇ 6ರವರೆಗೂ ಎಲ್ಲರನ್ನೂ ಇಲ್ಲೇ ಇಡಲಾಗಿತ್ತು. ಆ ಎರಡು ವರ್ಷಗಳ ಅವಧಿಯಲ್ಲಿ ಕಸ್ತೂರಬಾ ಹಾಗೂ ಮಹದೇವ ದೇಸಾಯಿಯವರು ಅನಾರೋಗ್ಯಕ್ಕೆ ತುತ್ತಾಗಿ ಕೊನೆಯುಸಿರೆಳೆದರು. ಅವರ ಸಮಾಧಿಗಳನ್ನು ಅರಮನೆಯ ಆವರಣದಲ್ಲಿ ನೋಡಬಹುದು.

1969ರಲ್ಲಿ ಪ್ರಿನ್ಸ್ ಕರೀಂ ಹುಸೇನ್ ಆಗಾಖಾನ್ IV ಅವರು ಈ ಅರಮನೆಯನ್ನು 'ಗಾಂಧಿ ಸ್ಮಾರಕ ಸಮಿತಿ'ಗೆ ಬಿಟ್ಟುಕೊಟ್ಟರು. ಈಗ ಅರಮನೆಯನ್ನು 'ಗಾಂಧಿ ನ್ಯಾಷನಲ್ ಮೆಮೋರಿಯಲ್' ಎಂದೂ ಕರೆಯುತ್ತಾರೆ.

## ಸ್ವಾತಂತ್ರ್ಯಪೂರ್ವಕ್ಕೆ ಪಯಣ

ಮುಂದಿನ ದ್ವಾರಕ್ಕೆ ಬರುತ್ತಿದ್ದಂತೆ ಎಡಗಡೆಗೆ ಈ ಅರಮನೆಯ ಬಗ್ಗೆ ಕಲ್ಲಿನಲ್ಲಿ ಕೆತ್ತಲಾಗಿದೆ. ನಾಲ್ಕೈದು ಮೆಟ್ಟಿಲು ಹತ್ತಿದಾಗ ಹೊರಾಂಗಣ ಸಿಗುತ್ತದೆ. ಅರಮನೆಗೆ ಅಗಲವಾದ ಕಾರಿಡಾರ್ (ಸುಮಾರು 2.5 ಮೀಟರ್) ಇದ್ದು, ಇದರಲ್ಲಿ ಅರಮನೆಯನ್ನು ಒಂದು ಸುತ್ತು ಬರಬಹುದು. ಈ ಕಟ್ಟಡಕ್ಕೆ ಮೂರು ಮಹಡಿಗಳಿದ್ದು, ಐದು ದೊಡ್ಡ ಕೊಠಡಿಗಳಿವೆ.

ಮೊದಲಿನ ದೊಡ್ಡ ಕೋಣೆಗೆ ಅಡಿಯಿಡುತ್ತಿದ್ದಂತೆ ಒಮ್ಮೆ ಸ್ತಬ್ಧನಾದೆ. ಜನರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಮಹಾತ್ಮ ಗಾಂಧೀಜಿಯೇ ಜೀವಂತ ಕುಳಿತಿರುವಂತೆ ಭ್ರಮೆ ಹುಟ್ಟಿಸುವ ಅವರ ಪ್ರತಿಕೃತಿ ಎದುರಿಗಿತ್ತು. ಎಲ್ಲವೂ ನಿಶ್ಶಬ್ದ. ಹತ್ತು ನಿಮಿಷ ಕಣ್ಮುಚ್ಚಿ ಕುಳಿತೆ. ಸ್ವಾತಂತ್ರ್ಯ ಯೋಧರ ಬಗ್ಗೆ, ಸಮರದ ಬಗ್ಗೆ ಗೋಡೆಯ ತುಂಬಾ ಬರೆಯಲಾಗಿದೆ. ಅಲ್ಲಿಂದ ಎದ್ದು ಮುಂದಿನ ಕೊಠಡಿಗೆ ಹೋದಾಗ, ಅಲ್ಲಿ ಗಾಂಧೀಜಿ ಉಪಯೋಗಿಸಿದ ವಸ್ತುಗಳಿದ್ದವು. ಅವರ ಚಪ್ಪಲಿ, ಕನ್ನಡಕ, ಚರಕ, ಇತ್ಯಾದಿ ವಸ್ತುಗಳು ಅಲ್ಲಿವೆ. ಮುಂದಿನ ಕೊಠಡಿಗೆ ಹೋದಾಗ ಬ್ರಿಟಿಷರ ವಿರುದ್ಧ ಘೋಷಣೆ ಕೂಗುತ್ತಾ ಹೊರಟಿರುವ ಸ್ವಾತಂತ್ರ್ಯ ಹೋರಾಟಗಾರರ ದಂಡೇ ಇತ್ತು. ಅವೆಲ್ಲ ಪ್ರತಿಕೃತಿಗಳಾಗಿದ್ದರೂ ಬಹಳ ನೈಜವಾಗಿ ಮೂಡಿಬಂದಿವೆ. ಅಲ್ಲೇ ಮೂಲೆಯಲ್ಲಿ ಕುಳಿತಿರುವ ಗಾಂಧೀಜಿಯ ಕಲಾಕೃತಿಯಂತೂ ಥೇಟ್ ಅವರನ್ನೇ ನೋಡಿದ ಅನುಭವ ಉಂಟುಮಾಡುತ್ತದೆ. ಅವರು ಉಪಯೋಗಿಸಿದ ಒಂದು ರೇಡಿಯೊ ಸಹಿತ ಅಲ್ಲಿದೆ.

ಗಾಂಧಿಯನ್ನು ಮನಸ್ಸಿನಲ್ಲಿ ತುಂಬಿಕೊಂಡು ಹೊರಗೆ ಬಂದವನಿಗೆ ಬೆಳಗಿನ ಬಿಸಿಲಲ್ಲಿ ಆ ಉದ್ದನೆಯ ಕಾರಿಡಾರಿನ ವಿನ್ಯಾಸದ ನೆರಳು ಅದ್ಭುತವಾಗಿ ಕಂಡಿದ್ದಂತೂ ಸುಳ್ಳಲ್ಲ. ಅಲ್ಲೇ ಪಕ್ಕದ ಪ್ರವಾಸಿಗನ ಸಹಾಯದಿಂದ ನನ್ನ ಒಂದು ಸೆಲ್ಫಿಯನ್ನೂ ತೆಗೆದಿದ್ದಾಯಿತು! ಮುಂದಿನ ಬಹುಮುಖ್ಯವಾದ ಕೆಲಸ ಕಸ್ತೂರಬಾ ಅವರ ಸಮಾಧಿ ನೋಡುವುದಾಗಿತ್ತು. ಹಾಗೇ ಕೆಳಗಿಳಿದು ಸ್ವಲ್ಪ ನಡೆದರೆ ಅರಮನೆಯ ಎಡಗಡೆಯಲ್ಲೇ ಸಮಾಧಿಯಿದೆ. ಅರಮನೆಯ ಸುತ್ತಲೂ ಉತ್ತಮ ಮಟ್ಟದ ಲಾನ್ ರೂಪಿಸಿರುವುದರಿಂದ ಮತ್ತು ಅಲ್ಲಲ್ಲಿ ಸುಂದರ ಮರಗಳಿರುವುದರಿಂದ ಅಲ್ಲಿ ನಡೆಯಲು ಖುಷಿಯೇ. ಸಮಾಧಿ ಬಳಿಗೆ ಹೋಗಿ ಮೌನವಾಗಿ ಕುಳಿತು ಬಂದಿದ್ದಾಯಿತು.

ಆವರಣವೂ ಸೇರಿದಂತೆ ಒಟ್ಟು 19 ಎಕರೆ ವಿಸ್ತೀರ್ಣದಲ್ಲಿ ಅರಮನೆ ವ್ಯಾಪಿಸಿಕೊಂಡಿದೆ. ಅದರ ನಿರ್ವಹಣೆ ತುಂಬಾ ಉತ್ತಮವಾಗಿದೆ. ಅಲ್ಲಿನ ಸ್ವಚ್ಛತೆ ಸಂದರ್ಶಕರನ್ನು ಶಾಂತವಾಗಿರಿಸಿತ್ತೋ ಏನೋ – ಅಷ್ಟು ಜನರಿದ್ದರೂ ಗಜಿಬಿಜಿ, ಗದ್ದಲವಿರಲಿಲ್ಲ. ಆದರೆ ಸಮಾಧಿಯನ್ನು ಇನ್ನೂ ಚಂದವಾಗಿಡಬಹುದಿತ್ತು ಅನ್ನಿಸಿತು.

ಪ್ರತಿಕ್ರಿಯಿಸಿ: feedback@sudha.co.in



ಗಾಂಧಿ ಉಪಯೋಗಿಸುತ್ತಿದ್ದ ರೇಡಿಯೊ